ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August, 103-107
©*IIMRD*, Mysuru
IIMRD JOURNALS
www.iimrd.com

# ಜನಪದರ ನಂಬಿಕೆಗಳಲ್ಲಿ ಜಲದ ಪರಿಕಲ್ಪನೆ

**ರಾಚಪ್ಪ. ಎನ್***
* ಸಂಶೋಧನಾ ವಿದ್ಯಾರ್ಥಿ, ಮಹಾರಾಜ ಕಾಲೇಜು, ಮೈಸೂರು.

***ಸಾರಾಂಶ* (Abstract)**

*ಜನಪದರು ತಮ್ಮ ಜೀವನಾದುದ್ದಕ್ಕೂ ಅನೇಕ ರೀತಿಯ ನಂಬಿಕೆಗಳೊಂದಿಗೆ ಬದುಕುತ್ತಾರೆ. ಅವರ ನಂಬಿಕೆಗಳು ನಿಂತ ನೀರಾಗದೆ ಹರಿಯುವ ಕಾವೇರಿಯಂತೆ ಸದಾ ಚಲಿಸುತ್ತಿರುತ್ತವೆ. ಗ್ರಾಮೀಣರು ತಮ್ಮ ಹಲವು ನಂಬಿಕೆಗಳನ್ನು ಮೌಖಿಕ ಪರಂಪರೆಯಿಂದ ತಲಾತಲಾಂತರವಾಗಿ ಇನ್ನೂ ಉಳಿಸಿಕೊಂಡು ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಜಲವನ್ನು ಕುರಿತು ಜನಪದರಲ್ಲಿರುವ ನಂಬಿಕೆಗಳ ಬಗ್ಗೆ ವಿಶ್ಲೇಷಿಸಲಾಗಿದೆ.*

***ಮುಖ್ಯ ಪದಗಳು* (Keywords):** ಜಾನಪದ, ಜನಪದರು, ನಂಬಿಕೆ, ಜಲ, ಸಂಸ್ಕೃತಿ, ಗ್ರಾಮೀಣ ಜೀವನ.

## ಪೀಠಿಕೆ

ಭಾರತವು ಹಳ್ಳಿಗಳಿಂದ ಕೂಡಿದ ರಾಷ್ಟ್ರ. ಹಳ್ಳಿಗಳಿಲ್ಲದ ಭಾರತವನ್ನು ನಾವು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಚಿಂತಕರ ಪ್ರಕಾರ ಹಳ್ಳಿಗಳ ಅಭಿವೃದ್ಧಿಯಾಗದೆ ರಾಷ್ಟ್ರದ ಅಭಿವೃದ್ಧಿ ಅಸಾಧ್ಯ. ನಾವು ಮಾನವನ ಉಗಮವನ್ನು ಗಮನಿಸಿದಾಗ ಮಂಗನಿಂದ ಮಾನವ ಎಂದು ತಿಳಿದು ಬರುತ್ತದೆ. ಈ ಹಿನ್ನೆಲೆಯಲ್ಲಿ ಆಧುನಿಕ ವಿಜ್ಞಾನಿ ಎಂದು ಪ್ರಸಿದ್ಧಿ ಪಡೆದ ಡಾರ್ವಿನ್ನನ ಪ್ರಕಾರ ಮಾನವ ಹಂತ ಹಂತವಾಗಿ ವಿಕಾಸ ಹೊಂದಿದ ಎಂದು ತಿಳಿಯಬಹುದು. ಭೂಮಂಡಲದಲ್ಲಿ ಎಲ್ಲಿ ಜಲದ ಸೆಲೆ ಇರುತ್ತದೆಯೋ ಅಲ್ಲಿ ಯಾವುದಾದರೂ ಒಂದು ಜೀವಿ ಇರುತ್ತದೆ. ಜಲವನ್ನು ಹೊರತು ಪಡಿಸಿ ಯಾವುದೇ ಜೀವಿಯು ಬದುಕಿರಲು ಸಾಧ್ಯವಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈ ಪ್ರಕೃತಿಯಲ್ಲಿ ಅನೇಕ ರೀತಿಯ ಜೀವಿಗಳು ನೀರಿನಿಂದ ಜನಿಸಿ ಹಂತ ಹಂತವಾಗಿ ವಿಕಾಸ ಹೊಂದುತ್ತಾ ತಮ್ಮ ಅಸ್ತಿತ್ವವನ್ನು ಕಂಡು ಕೊಳ್ಳುತ್ತಿವೆ.

ಜನಪದರು ತಮ್ಮ ದಿನನಿತ್ಯದ ಬದುಕಿನಲ್ಲಿ ಬರುವ ಕಷ್ಟ–ಸುಖಗಳನ್ನು ತಾಳೆ ನೋಡುತ್ತಾ ಹೋಗುತ್ತಾರೆ. ಗ್ರಾಮೀಣರು ತಮ್ಮ ಹಲವು ನಂಬಿಕೆಗಳನ್ನು ಮೌಖಿಕ ಪರಂಪರೆಯಿಂದ ತಲಾತಲಾಂತರವಾಗಿ ಇನ್ನೂ ಉಳಿಸಿಕೊಂಡು ಬಂದಿದ್ದಾರೆ. "ಮನುಷ್ಯ ಭಾವನೆ ಒಂದು ವಿಷಯಕ್ಕೆ ಗಟ್ಟಿಯಾಗಿ ಒಪ್ಪಿಸಿಕೊಂಡಾಗ ಅದು ನಂಬಿಕೆಯಾಗುತ್ತದೆ".[1] ಅಲ್ಲದೆ ಧಾರ್ಮಿಕ, ಸಾಂಸ್ಕೃತಿಕ, ಕೌಟುಂಬಿಕ, ವೈಯಕ್ತಿಕ, ಸಾಮಾಜಿಕ ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ಅವರು ಪಂಚಭೂತಗಳನ್ನು ಅನುಕರಿಸುತ್ತಾ

[1]ಗೊರೂರು ಅನಂತರಾಜು, ಹಬ್ಬಗಳು : ಜನಪದರ ನಂಬಿಕೆಗಳು. ಪು. 21.

ಹೋಗುತ್ತಾರೆ. ಈ ಸಂದರ್ಭದಲ್ಲಿ ಮಾನವ ದೇಹವೇ ಪಂಚಭೂತಗಳಿಂದ ಕೂಡಿದೆ ಎನ್ನುವುದು ಅವರ ಬಲವಾದ ನಂಬಿಕೆ. ಭೂಮಿ, ಜಲ, ಅಗ್ನಿ, ವಾಯು ಮತ್ತು ಆಕಾಶ ಇವುಗಳನ್ನು ಪಂಚಭೂತಗಳೆಂದು ತಿಳಿಯಬಹುದಾಗಿದೆ. ಭೂಮಿಯನ್ನು ಭಾರಕ್ಕೆ, ಜಲವನ್ನು ಬೆವರು, ಜಲಮೂತ್ರಕ್ಕೆ, ಅಗ್ನಿಯನ್ನು ಕೋಪಕ್ಕೆ, ಗಾಳಿಯನ್ನು ಉಸಿರಾಟಕ್ಕೆ ಹಾಗೂ ಆಕಾಶವನ್ನು ತಮ್ಮ ಇಡೀ ಶರೀರಕ್ಕೆ ಹೋಲಿಸಿ ಈ ದೇಹವೇ ಪಂಚಭೂತಗಳ ಒಟ್ಟಾರೆ ಸಮ್ಮಿಲನ ಎಂದು ನಂಬಿದ್ದಾರೆ.

ಮಾನವನ ಬದುಕಿನಲ್ಲಿ ನಂಬಿಕೆ ಹಲವು ಮಗ್ಗಲುಗಳು ತೆರೆದುಕೊಳ್ಳುತ್ತಾ ಹೋಗುತ್ತದೆ. ಈ ದೆಸೆಯಲ್ಲಿ ಯಾವುದೇ ವಿಷಯ, ವಿಚಾರವನ್ನು ನಾವು ತೆಗೆದುಕೊಂಡರೆ ಆ ಸಂಬಂಧ ಯಾವುದಾದರು ವಸ್ತು, ವ್ಯಕ್ತಿ ನಮಗೆ ಕಾಣಸಿಗುತ್ತದೆ. ಜನಪದ ವಿದ್ವಾಂಸರಾದ ಆರ್.ಎಸ್.ಬಾಗ್ಸ್ ಅವರು ನಂಬಿಕೆಗಳನ್ನು ಪುರಾಣ, ಐತಿಹ್ಯ, ಪದ್ಧತಿ, ಮಾಂತ್ರಿಕತೆ, ವೈದ್ಯ ಮತ್ತು ಕಾಲಜ್ಞಾನ ಜಾನಪದದ ಹಿನ್ನೆಲೆಯಲ್ಲಿ ಆರು ವಿಧಗಳಲ್ಲಿ ವೈಜ್ಞಾನಿಕವಾಗಿ ವಿಂಗಡಿಸಿದ್ದಾರೆ. ಈ ಪ್ರಕಾರಗಳಲ್ಲಿ ಇನ್ನೂ ಅನೇಕ ಒಳಪ್ರಬೇದಗಳಿವೆ.

Wayland D. Hand ರವರು ಜನಪದ ನಂಬಿಕೆಗಳನ್ನು ಮನುಷ್ಯ ಶರೀರ ಮತ್ತು ವೈದ್ಯಕ್ಕೆ ಸಂಬಂಧಿಸಿದವು ; ಜೀವನ ಚಕ್ರಕ್ಕೆ ಸಂಬಂಧಿಸಿದವು – ಅಂದರೆ ಹುಟ್ಟು, ಮದುವೆ, ಸಾವು ಇತ್ಯಾದಿ ; ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳು: ಇದರಲ್ಲಿ ಸಂಚಾರ ಹಾಗೂ ಸಾರಿಗೆ, ಕಾನೂನು ವಿಚಾರಗಳು, ಮನೆ, ಶಾಲೆ ಮುಂತಾದವುಗಳಿಗೆ ಸಂಬಂಧಿಸಿದವು ; ಮಾಟ ಮತ್ತು ಮಂತ್ರವಿದ್ಯೆ (Witchcraft and Magic) ; ಭೂತ, ಪ್ರೇತ, ಸಾವು ಮುಂತಾದವುಗಳಿಗೆ ಸಂಬಂಧಿಸಿದವು; ಸಂಖ್ಯೆಗಳು ಮತ್ತು ಖಗೋಳ ಸಂಗತಿಗಳು; ಮತ್ತು ಬೇಸಾಯಕ್ಕೆ ಸಂಬಂಧಿಸಿದವು – ಅಂದರೆ ಹವಾಮಾನ, ಪ್ರಾಣಿಸಾಕಣೆ, ಸಸ್ಯಗಳನ್ನು ಬೆಳೆಸುವುದು, ಬೇಟೆ, ಮೀನುಗಾರಿಕೆ ಇತ್ಯಾದಿಗಳು ಎಂಬುದಾಗಿ ವರ್ಗೀಕರಿಸಿದ್ದಾರೆ. ಕರ್ನಾಟಕದ ಜನಪದ ನಂಬಿಕೆಗಳಲ್ಲಿ ಈ ಎಲ್ಲ ಪ್ರಕಾರಗಳಿಗೆ ನಿದರ್ಶನಗಳು ಸಿಗುತ್ತವೆ.[2]

ಜನಪದರ ಬದುಕಿನಲ್ಲಿ ಜನನ, ಋತುಮತಿ, ಮದುವೆ, ಸಾವು, ಹಬ್ಬ–ಹರಿದಿನ, ವಾರ–ತಿಥಿ, ಊಟ–ಉಪಚಾರ, ಪೂಜೆ–ಪುನಸ್ಕಾರ, ನಿದ್ರೆ–ಎಚ್ಚರ, ಸ್ವಪ್ನ, ರೋಗ–ರುಜಿನ, ಶುಭ–ಅಶುಭ ಹಾಗೂ ಶಕುನ–ಅಪಶಕುನಗಳಿಗೆ ಸಂಬಂಧಿಸಿದಂತೆ ಅನೇಕ ರೀತಿಯ ನಂಬಿಕೆಗಳನ್ನು ನೋಡಬಹುದಾಗಿದೆ. ಈ ಪ್ರಬಂಧದಲ್ಲಿ ನಮ್ಮ ಜನಪದರಿಗೆ ಜಲದ ಮೇಲೆ ಇರುವ ನಂಬಿಕೆಗಳನ್ನು ವಿಶ್ಲೇಷಣೆ ಮಾಡುವುದಕ್ಕೆ ನನ್ನ ವ್ಯಾಪ್ತಿಯನ್ನು ಸೀಮಿತಗೊಳಿಸಿದ್ದೇನೆ.

**ಜಲ ಸಂಬಂಧಿ ನಂಬಿಕೆಗಳು**

ಮಾನವ ಹಂತ ಹಂತವಾಗಿ ವಿಕಾಸ ಹೊಂದಿ ಆದಿ ಮಾನವನಿಂದ ಆಧುನಿಕ ಮಾನವನಾಗಿ ಮಾರ್ಪಟ್ಟಿದ್ದಾನೆ. ಮನುಷ್ಯ ಸ್ವಾರ್ಥ ಹಾಗೂ ಪರಾವಲಂಬಿ ಜೀವಿ. ವ್ಯಕ್ತಿ ಬೇರೆಯವರ ಸಹಾಯವಿಲ್ಲದೆ ಬದುಕಿದ್ದು, ಬದುಕುವುದು ಅಂದರೆ ಅವನು "ನಟ್ಟ ನಡುರಾತ್ರಿಯಲ್ಲಿ ಅಮಾವಾಸೆಯ ಕತ್ತಲಿನಲ್ಲಿ ಒಬ್ಬ ಕಪ್ಪು

[2] ಅರವಿಂದ ಮಾಲಗತ್ತಿ. (ಪ್ರ.ಸಂ.) ; ಆರ್‌ವಿಯಸ್ ಸುಂದರಂ ಮತ್ತು ಎನ್.ಎಸ್.ತಾರಾನಾಥ. (ಸಂ.) ಜಾನಪದ ತತ್ತ್ವಗಳು. ಪು.114.

ಸುಂದರಿ ಕಪ್ಪು ಸುಂದರನಿಗೆ ಕಣ್ಣು ಹೊಡೆದಳು ಎಂಬುವುದು ಎಷ್ಟು ಸತ್ಯವೋ ಅಷ್ಟೇ ಸಮಂಜಸವಾದದೆಂದು ನಂಬಬಹುದು.

ಜನಪದರಲ್ಲಿ ಜಲಕ್ಕೆ ಸಂಬಂಧಿಸಿದಂತೆ ಇರುವ ನಂಬಿಕೆಗಳು ಕೆಳಗಿನಂತಿವೆ.

- ಚಪ್ಪಲಿ ಹಾಕಿಕೊಂಡು ಕಾವೇರಿ ನದಿಗೆ ಇಳಿಯಬಾರದು
- ಕಾವೇರಿ ನದಿಗೆ ಉಗುಳಬಾರದು, ಕಲ್ಲನ್ನು ಎಸೆಯಬಾರದು.
- ಬೆಂಕಿ, ನೀರು ಸ್ವಪ್ನದಲ್ಲಿ ಕಾಣಿಸಬಾರದು.
- ಮನೆಯಲ್ಲಿ ನಿಂತ ನೀರಿನ ಮೇಲೆ ಕೈಯಿಂದ ನೆಲದ ಮೇಲೆ ಬರೆದರೆ ಸಾಲ ಹೆಚ್ಚು.
- ಸ್ನಾನ ಮಾಡುವಾಗ ಕಾದ ನೀರು ತಣ್ಣಾಗಾಗಿದರು ಸ್ವಲ್ಪ ತಣ್ಣೀರು ಹಾಕಬೇಕು.
- ಕಾಲು ತೊಳೆಯುವಾಗ ಸಂಪೂರ್ಣ ತೊಳೆಯಬೇಕು. ಇಲ್ಲದಿದ್ದರೆ ಶನಿ ಕಾಟ ತಪ್ಪುವುದಿಲ್ಲ.
- ಬೆನ್ನು ಉಜ್ಜಿ ಬರುವಾಗ ಕಾಲಿಗೆ ನೀರು ಹಾಕಬೇಕು. ಇಲ್ಲದಿದ್ದರೆ ಸತ್ತಾಗ ಅವರ ಮುಖ ನೋಡಲು ಸಿಗುವುದಿಲ್ಲ.
- ದೇವಸ್ಥಾನದಿಂದ ಬಂದಾಗ ಕಾಲು ತೊಳೆಯದೆ ಮನೆಯೊಳಗೆ ಹೋಗಬಹುದು.
- ಮದುವೆಗೆ ಹೋದ ಮೇಲೆ ಧಾರೆ ಮುಗಿಸಿ, ಧಾರೆ ಹುಯ್ಯಿದು ಬರಬೇಕು.
- ಊಟ ಮಾಡಿದ ತಕ್ಷಣ ಸ್ನಾನ ಮಾಡಬಾರದು.
- ನೀರು ಇಲ್ಲದವರ ಮನೆಗೆ ಲಕ್ಷ್ಮಿ ಬರುವುದಿಲ್ಲ.
- ಸೂತಕದ ಮನೆಯಲ್ಲಿ ನೀರು ಕುಡಿಯಬಾರದು.
- ಮಕ್ಕಳು ಚಂಡಿ ಹಿಡಿದರೆ ರತ್ನೀರು, ಕಪ್ಪೀರು ಮಾಡಿ ದಾರಿಗೆ ಎರಚಬೇಕು.
- ಸ್ನಾನ ಮಾಡಿ ಹೊರಗೆ ನಿದ್ದೆ ಮಾಡಬಾರದು.
- ದಿನಕ್ಕೆ 2ಕ್ಕಿಂತ ಹೆಚ್ಚು ಬಾರಿ ಸ್ನಾನ ಮಾಡಬಾರದು.
- ಅಗ್ನಿ ಮತ್ತು ಜಲ ಎರಡನ್ನು ಒಬ್ಬರೇ ತೆಗೆದುಕೊಂಡು ಹೋಗಬಾರದು.
- ಯುಗಾದಿ ದಿನ ಬೇವಿನ ಸೊಪ್ಪನ್ನು ನೀರಿನಲ್ಲಿ ಹಾಕಿ ಸ್ನಾನ ಮಾಡಬೇಕು.
- ಗಂಡನ ಮನೆಗೆ ಹೋಗುವಾಗ ತಲೆ ತೊಳಕೊಂಡು ಹೋಗಬಾರದು.
- ಊರಿಗೆ ಹೋಗುವವರನ್ನು ಕಳ್ಸಿ ಮನೆಯಲ್ಲಿ ತಲೆ ತೊಳೆಯಬಾರದು.
- ಸಣ್ಣ ಮಗುವಿಗೆ ನೀರು ಹುಯ್ಯಿದು ಕಣ್ಣೆಸರು, ಕಾಲಧೂಳು ಆಗದಂತೆ ಕೊನೆಯಲ್ಲಿ ಮಗುವಿನ ಸುತ್ತ 3 ಬಾರಿ ಕೈ ಬಳಸಿ ನೀರು ಎರಚಿದರೆ ಒಳ್ಳೆಯದಾಗುತ್ತದೆ.
- ಹೆಣ್ಣು ನೋಡಲು ಹೊರಟಾಗ ತುಂಬಿದ ಕೊಡ ಸಿಕ್ಕರೆ ಶುಭವಾಗುತ್ತೆ.

- ಕಾವೇರಿ ನದಿಗೆ ಕಲ್ಲು ಎಸೆದರೆ ತಾಯಿ ಹೊಟ್ಟೆಗೆ ಕಲ್ಲು ಹಾಕಿದಂತೆ.
- ಹೆಂಗಸರು ನೀರಿನಲ್ಲಿ ಮುಖ ನೋಡಿಕೊಂಡು ಕುಂಕುಮ ಇಟ್ಟುಕೊಳ್ಳಬಾರದು.
- ನೀರನ್ನು ಹೆಚ್ಚಾಗಿ ಸುರಿಯಬಾರ್ದು, ನೀರು ಸುರಿದ ಕೈ ನಿಧಾನ.
- ಹೊರಳಕಲ್ಲಿನಲ್ಲಿ ನೀರು ಬಿಟ್ಟರೆ ಹೆಚ್ಚು ಸಾಲವಾಗುತ್ತೆ.
- ಸಂಬಂಧ ಕಳೆಯಬೇಕಾದರೆ ಎಳ್ಳು ನೀರು ಬಿಡಬೇಕು.
- ಹಾವು ಕಡಿದಾಗ ಒಂದು ದಿನ ಪೂರ್ತಿ ನೀರು ಕುಡಿಯಬಾರದು, ನದಿ ದಾಟಿಸಬಾರದು.
- ನೀರು ಸೋರುವ ಹಾಗೆ ಬಟ್ಟೆಗಳನ್ನು ಒಣಗಿ ಹಾಕಬಾರದು.
- ಸ್ನಾನ ಮಾಡಿದ ಮೇಲೆ ಬಕೆಟ್ ತಳದಲ್ಲಿ ನೀರನ್ನು ಬಿಟ್ಟು ಬರಬೇಕು.
- ಮೈಲಿಗೆ ಅಥವಾ ಮುಟ್ಟಾದವರು ನೀರು ಮುಟ್ಟಬಾರದು.
- ಸಾಯುವವರಿಗೆ ಬಾಯಲ್ಲಿ ನೀರು ಹಾಕಬೇಕು.
- ಸ್ನಾನ ಮಾಡಿಕೊಂಡು ಮಡಿ ಬಟ್ಟೆ ಉಟ್ಟು ಮನೆಯಲ್ಲಿ ನೀರು ಸಿಂಪಡಿಸಿದರೆ ಮನೆ ಮಡಿಯಾದಂತೆ.
- ಕಾವೇರಿ ನದಿ, ಬಾವಿ ನೀರನ್ನು ಪೂಜೆಗೆ ಬಳಸಬೇಕು.
- ರಾತ್ರಿ ಸಮಯದಲ್ಲಿ ಪಕ್ಕದ ಮನೆಗೆ ನೀರು ಕೊಡಬಾರದು.
- ಗ್ರಹಣದ ದಿನಗಳಲ್ಲಿ ನದಿ ನೀರು ಮೈಲಿಗೆಯಾಗುತ್ತದೆ.
- ದಾನ ಕೊಡುವಾಗ ಧಾರೆ ಎರೆದು ಕೊಡಬೇಕು.
- ತೊನ್ನು ಆಗಿ ಸತ್ತವರನ್ನು ಮಣ್ಣು ಮಾಡಿದರೆ ಮಳೆ ಬರುವುದಿಲ್ಲ.
- ಕಲ್ಯಾಣಿ ನೀರು ಹೇಗಿದ್ದರು ಅಸಹ್ಯ ಪಡದೆ ಸ್ನಾನ ಮಾಡಬೇಕು.
- ಊಟ ಮಾಡುವಾಗ ಸೀನು ಬಂದರೆ ನೆಲಕ್ಕೆ ಮತ್ತು ಕೈ ಮೇಲೆ ನೀರು ಹಾಕೊಂಡು ಊಟ ಮಾಡಬೇಕು.
- ದೇವಸ್ಥಾನಗಳ ತೀರ್ಥದಲ್ಲಿ ರುಚಿ ನೋಡಬಾರದು.
- ಕನಸಿನಲ್ಲಿ ಹರಿಯೋ ನದಿ ಕಂಡರೆ ಒಳ್ಳೆಯದು.
- ಕಾವೇರಿ(ಗಂಗಾ) ದಿಕ್ಕಿನಿಂದ ಬಿತ್ತಿದರೆ ಹೆಚ್ಚೆಚ್ಚು ಬೆಳೆ ಬರುತ್ತದೆ.
- ಯಾತ್ರೆಗೆ ಹೋಗುವಾಗ ದಾರಿ ಮಧ್ಯದಲ್ಲಿ ಯಾರಾದರು ಸತ್ತರೆ, ಅವರನ್ನು ನಡುದಾರಿಯಲ್ಲಿಯೇ ನೀರಿಗೆ (ಕಾವೇರಿ, ಗಂಗೆ) ಬಿಟ್ಟು ಹೊರಡಬೇಕು.
- ಉರಿಯುತ್ತಿರುವ ಒಲೆಯನ್ನು ನೀರು ಹಾಕಿ ಕೆಡಿಸಬಾರದು.

- ಕೆರೆ ಮುಂದೆ ಶನೇಶ್ವರಸ್ವಾಮಿ ದೇವಸ್ಥಾನ ಇದ್ದರೆ ಆ ಕೆರೆ ತುಂಬದಿಲ್ಲ.
- ರಕ್ತ ಬರುವ ಜಾಗಕ್ಕೆ ತಣ್ಣೀರ ಬಟ್ಟೆ ಹಾಕಿ ಕಟ್ಟಬೇಕು.
- ಹಬ್ಬದ ದಿನಗಳಲ್ಲಿ ನಡುಮನೆಯಲ್ಲಿ ತುಂಬಿದ ಕೊಡದಲ್ಲಿ ಅಥವಾ ಚೆಂಬಿನಲ್ಲಿ ನೀರು ಇಡಬೇಕು.
- ಸ್ನಾನ ಮಾಡಿ ಬರುವಾಗ ದೇವರಿಗೆ ಕೈ ಮುಗಿದು ಬರಬೇಕು.

ಹೀಗೆ ನಾವು ನಂಬಿಕೆಗಳನ್ನು ಪಟ್ಟಿ ಮಾಡುತ್ತಾ ಹೋದರೆ ಜನಪದರ ಬದುಕಿನೂದ್ದಕ್ಕೂ ಅವರ ಸಮಯಪ್ರಜ್ಞೆ, ಅನುಭವ, ಪರಿಸರಗಳ ಆಧಾರದ ಮೇಲೆ ಅಸಂಖ್ಯಾ ನಂಬಿಕೆಗಳನ್ನು ಜಲದ ಬಗ್ಗೆ ತಿಳಿದು ಕೊಳ್ಳಬಹುದಾಗಿದೆ.

**ಉಪಸಂಹಾರ**

ಹುಟ್ಟು ಆಕಸ್ಮಿಕ, ಸಾವು ಖಚಿತ ಎಂಬ ಮಾತಿನಂತೆ ಮಾನವನ ಜನನದಿಂದ ಮರಣದವರೆಗೆ ಅವನ ಬದುಕಿನಲ್ಲೆ ಲೆಕ್ಕಕ್ಕೆ ಸಿಗದಷ್ಟು ಆಚರಣೆ ಮತ್ತು ನಂಬಿಕೆಗಳು ಬೆರೆತು ಹೋಗಿವೆ. "ನಂಬಿಕೆಗಳ ಸಹಾಯವಿಲ್ಲದೆ ಬದುಕುವ ಮಾನಸಿಕ ಗಟ್ಟಿತನ ಎಲ್ಲರಿಗೂ ಸಾಧ್ಯವಾಗಲಾರದು, ಅನೇಕರು ಬದುಕುವ ಪರಿಸರ ಅವರ ತಿಳುವಳಿಕೆಯ ಇತಿಮಿತಿ ಮುಂತಾದ ಸಂಗತಿಗಳು ಅವರ ಬದುಕಿನಲ್ಲಿ ಕೆಲವಾದರೂ ನಂಬಿಕೆಗಳನ್ನು ಅವಲಂಬಿಸಲು ಕಾರಣವಾಗಬಹುದು".[3] ಆದರೆ ಯಾವುದೇ ಒಬ್ಬ ವ್ಯಕ್ತಿಯೂ ನಂಬಿಕೆಯನ್ನು ಬಿಟ್ಟು ಬದುಕಲು ಸಾಧ್ಯವಿಲ್ಲ. ತಾಯಿ ಸತ್ಯದ ಪ್ರತೀಕವಾದರೆ ತಂದೆ ನಂಬಿಕೆಯ ಪ್ರತಿರೂಪ ಎನ್ನುವುದು ನನ್ನ ಅಭಿಪ್ರಾಯ. ಕೆಲವೊಮ್ಮೆ ಸತ್ಯವನ್ನು ನಾವು ನಂಬಬಹುದೆ ಎಂದು ಹೇಳುತ್ತೇವೆ. ಅಂದರೆ ಸತ್ಯದ ಮುಂದುವರೆದ ಭಾಗ ಎಂದರೆ ನಂಬಿಕೆ.

**ಪರಾಮರ್ಶನಾ ಗ್ರಂಥಗಳು**


- ಅರವಿಂದ ಮಾಲಗತ್ತಿ. (ಪ್ರ.ಸಂ); ಆರ್.ವಿಯಸ್ ಸುಂದರಂ ಮತ್ತು ಎನ್.ಎಸ್.ತಾರಾನಾಥ. (ಸಂ.) (1999). ಜನಪದ ತತ್ತ್ವಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಕೆಂಪಮ್ಮ. (2017). ಮಂಡ್ಯ ಜಿಲ್ಲೆಯ ಆಚರಣಾತ್ಮಕ ಜಾನಪದ. ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಮೈಸೂರು ವಿವಿ, ಮೈಸೂರು.
- ಗೊರೂರು ಅನಂತರಾಜು. ಹಬ್ಬಗಳು: ಜನಪದರ ನಂಬಿಕೆಗಳು. ಹಾಸನ.
- ಲಿಂಗಯ್ಯ ಡಿ ಮತ್ತು ಕೆ.ಆರ್.ಸಂಧ್ಯಾರೆಡ್ಡಿ. ಜಾನಪದ: ಸ್ವರೂಪ ಮತ್ತು ಸಾಹಿತ್ಯ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ವಾಲಿ ಎಂ.ಎನ್. ಕೃಷಿ ಜಾನಪದ. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.


[3] ವಾಲಿ ಎಂ.ಎನ್. ಕೃಷಿ ಜಾನಪದ. ಪು. 69.